## ಕರ್ನಾಟಕ ಸರ್ಕಾರ

ಸಂಖ್ಯೆ: ಪಿಯು 572/ಆವಿಎ/ವಿವಿ3/ಬಡ್ತಿ/2013 (ಭಾಗ-2)

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು 560012.
ದಿನಾಂಕ: 03.06.2017.

### ಅಧಿಕೃತ ಜ್ಞಾಪನ

**ವಿಷಯ:-** ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸುವ ಕುರಿತು.

**ಉಲ್ಲೇಖ:-**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 121 ಡಿಜಿಡಿ 2016 ದಿಃ 02.01.2017.
2. ಸರ್ಕಾರದ ಸೇರ್ಪಡೆ ಸಂಖ್ಯೆಃ ಇಡಿ 121 ಡಿಜಿಡಿ 2016 ದಿಃ 10.01.2017.
3. ಸರ್ಕಾರದ ಪತ್ರ ಸಂಖ್ಯೆಃ ಇಡಿ 121 ಡಿಜಿಡಿ 2016 ದಿಃ 22.04.2017.

# # #

ಸರ್ಕಾರವು ಉಲ್ಲೇಖ 1 ರ ಅಧಿಸೂಚನೆಯಲ್ಲಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರುಗಳಿಗೆ ವರ್ಗಾವಣೆ ಮಾಡಿ ಸ್ಥಳ ನಿಯುಕ್ತಿಗೊಳಿಸಿರುತ್ತದೆ. ಉಲ್ಲೇಖ 2 & 3 ರಲ್ಲಿ ವರ್ಗಾವಣೆಯ ಸ್ಥಳವನ್ನು ಮಾರ್ಪಾಡು ಮಾಡಲು ಕೋರಿಕೆ ಸಲ್ಲಿಸುವ ಪ್ರಾಂಶುಪಾಲರುಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಆದೇಶಿಸಿರುತ್ತದೆ. ಆದರಂತೆ, ಸ್ಥಳ ಆಯ್ಕೆ ಮಾಡಿಕೊಂಡಿರುವ ಈ ಜ್ಞಾಪನದ ಅನುಬಂಧದ ಅವರ ಹೆಸರಿನ ಮುಂದೆ ಸೂಚಿಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವರ್ಗಾಯಿಸಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ. ಸ್ಥಳನಿಯುಕ್ತಿ ಆದೇಶ ಮತ್ತು ಸ್ಥಳನಿಯುಕ್ತಿಗೊಂಡ ಪ್ರಾಂಶುಪಾಲರ ವಿವರಯುಳ್ಳ ಅನುಬಂಧವನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಿದ್ದು, ಡೌನ್‌ಲೋಡ್ ಮಾಡಿಕೊಂಡು ನಿಯುಕ್ತಿಗೊಳಿಸಿದ ಸ್ಥಳಕ್ಕೆ ಹಾಜರಾಗಲು ಸೂಚಿಸಿದೆ.

***ಷರತ್ತುಗಳು:-***

*1. ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಸ್ಥಳ ನಿಯುಕ್ತಿಗೊಂಡಿರುವ ಪ್ರಾಂಶುಪಾಲರುಗಳು ಆದೇಶ ಹೊರಡಿಸಿದ 07 ದಿನಗಳೊಳಗಾಗಿ ಕರ್ತವ್ಯದಿಂದ ಬಿಡುಗಡೆಯಾಗಿ ಸಕಾಲದಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು.*

*2. ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡ ಪ್ರಾಂಶುಪಾಲರ ಹುದ್ದೆಯಲ್ಲಿ ನಿಗಧಿತ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲಾಗುವುದು.*

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು – 560 001.
2. ಆಪ್ತ ಕಾರ್ಯದರ್ಶಿಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ನಿರ್ದೇಶಕರ/ಜಂಟಿ ನಿರ್ದೇಶಕರು (ಆ)/ಉಪ ನಿರ್ದೇಶಕರು (ಆ), ಆಪ್ತಶಾಖೆ.
4. ಶಾಖಾಧಿಕಾರಿಗಳು, ಇ-ಆಡಳಿತ – ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಗಣಕಯಂತ್ರದಲ್ಲಿ ಸೂಕ್ತ ನಮೂದು ಮಾಡಲು ಸೂಚಿಸಿದೆ.
5. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
6. ಸಂಬಂಧಪಟ್ಟ ಪ್ರಾಂಶುಪಾಲರಿಗೆ.
7. ಕಚೇರಿ ಪ್ರತಿ.

## ಅನುಬಂಧ

| ಕ್ರ ಸಂ | ಹೆಸರು & ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನ ವಿಳಾಸ ಶ್ರೀ/ಶ್ರೀಮತಿ | ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡ ಕಾಲೇಜಿನ ವಿಳಾಸ |
|---|---|---|
| 1. | ಕೆ ಟಿ ಶಿವರಾಂ, ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ವಂಡ್ಸೆ, ಕುಂದಾಪುರ ತಾ, ಉಡುಪಿ ಜಿಲ್ಲೆ. | ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಡ್ಡೇರಿ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು. |
| 2. | ನಾಗಮಲ್ಲೇಶ್, ಪ್ರಾಂಶುಪಾಲರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ. (ಸ್ಥಳನಿರೀಕ್ಷೆಯಲ್ಲಿರುವವರು) | ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊಮ್ಮರಗಲ್ಲಿ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ. |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.